ಕೆರೆ ಸಮ್ಮೇಳನ ಉದ್ಘಾಟನೆ | ಸಚಿವ ಅನಂತಕುಮಾರ್ ಹೇಳಿಕೆ

# ಪ್ರದೂಷಣ ತಡೆಗೆ ಹಸಿರು ತಂತ್ರಜ್ಞಾನ ಅಳವಡಿಕೆ ಪ್ರಯತ್ನ

ಶಿರಸಿ: ರಸಗೊಬ್ಬರ, ರಾಸಾಯನಿಕ, ಪೆಟ್ರೋಕೆಮಿಕಲ್, ಫಾರ್ಮಾಸುಟಿಕಲ್‌ಗಳು ಅತ್ಯಂತ ಹೆಚ್ಚು ಪ್ರದೂಷಣ ಮಾಡುವ ಉದ್ದಿಮೆಗಳಾಗಿವೆ. ಈ ಎಲ್ಲ ವಿಭಾಗಗಳ ಸಚಿವ ಜವಾಬ್ದಾರಿಯಿರುವ ತಾನು ಇವುಗಳಲ್ಲಿ ಹಸಿರು ತಂತ್ರಜ್ಞಾನ ಅಳವಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ ಎಂದು ಕೇಂದ್ರ ರಾಸಾಯನಿಕ ಹಾಗೂ ರಸಗೊಬ್ಬರ ಸಚಿವ ಅನಂತಕುಮಾರ ಹೇಳಿದರು.

ಸೋಂದಾ ಸ್ವರ್ಣವಲ್ಲಿ ಮಠದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ, ಸ್ವರ್ಣವಲ್ಲೀ ಸಂಸ್ಥಾನ, ವೃಕ್ಷಲಕ್ಷ ಆಂದೋಲನ ಮುಂತಾದ ಸಂಘಟನೆಗಳ ಸಹಯೋಗದಲ್ಲಿ ಗುರುವಾರ ಆರಂಭಗೊಂಡ ಪಶ್ಚಿಮಘಟ್ಟ ಕೆರೆಗಳು ಹಾಗೂ ಜಲಮೂಲಗಳ ಸಂರಕ್ಷಣೆ-ನಿರ್ವಹಣೆ ಕುರಿತ ಕೆರೆ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಭಾರತೀಯ ಸಂಸ್ಕೃತಿಗೆ ವಿರುದ್ಧವಾದ ಉಪಭೋಗ ಜೀವನ ಪದ್ಧತಿಯಿಂದ ಮನುಷ್ಯನ ಆರೋಗ್ಯಕ್ಕೆ ಮಾತ್ರವಲ್ಲ, ಪ್ರಕೃತಿಗೂ ತೊಂದರೆಯಾಗುತ್ತಿದೆ. ಮನುಷ್ಯ ತನ್ನ ಆರೋಗ್ಯ ಸಂರಕ್ಷಣೆ ಜೊತೆಗೆ, ಕೆರೆಗಳನ್ನು, ಪರಿಸರವನ್ನು ಉಳಿಸಿಕೊಳ್ಳುವುದಕ್ಕೆ ಹಸಿರು ಜೀವನ ಶೈಲಿ ಅಳವಡಿಸಿಕೊಳ್ಳಬೇಕು ಎಂದರು. ಅತ್ಯಂತ ಹೆಚ್ಚು ಮಾಲಿನ್ಯ ಉಂಟುಮಾಡುವ ರಸಗೊಬ್ಬರ, ರಾಸಾಯನಿಕ, ಪೆಟ್ರೋಕೆಮಿಕಲ್, ಫಾರ್ಮಾಸುಟಿಕಲ್‌ನಂತಹ ಉದ್ದಿಮೆಗಳಲ್ಲಿ ಹಸಿರು ತಂತ್ರಜ್ಞಾನ ಅಳವಡಿಸಲು ಪ್ರಯತ್ನಿಸುತ್ತಿರುವುದಾಗಿ ತಿಳಿಸಿದರು.

**ಹಸಿರು ಜೀವನ ಶೈಲಿ**

ಮಧ್ಯಪ್ರದೇಶದಲ್ಲಿ ಪ್ರಥ್ವಿರಾಜ ಚವ್ಹಾಣ ನೇತೃತ್ವದ ಸರ್ಕಾರ ಹಸಿರು ಜೀವನ ಶೈಲಿ ಅಳವಡಿಸುವುದಕ್ಕೆ ಸಿದ್ಧವಾಗಿದೆ. ನಮ್ಮಲ್ಲಿಯೂ ಅಂತದ್ದೇ ಯೋಜನೆ ಸಿದ್ಧಪಡಿಸಬೇಕಿದ್ದು, ಸಸ್ಯ, ಉದ್ಯಾನವನ ಬೆಳೆಸುವುದು, ಸೋಲಾರ ಬಳಕೆ, ನಗರಗಳಲ್ಲಿ ತಾರಸಿ ತೋಟ, ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವ ಮೂಲಕ ಸ್ವಚ್ಛ ಭಾರತದೊಂದಿಗೆ ಹಸಿರು ಭಾರತ ನಿರ್ಮಾಣ ಮಾಡಲು ಸಾಧ್ಯ ಎಂದರು.

ಕೆರೆಗಳು ಕುಡಿವ ನೀರು, ಕೃಷಿಗೆ ಮಹತ್ವದ್ದು. ಅಂತರ್ಜಲ ಮಟ್ಟ ಕೆಳಗಿಳಿಯುತ್ತಿದೆ. ಕೆರೆಯ ನೀರನ್ನು ಕೆರೆಗೆ ಚೆಲ್ಲಬೇಕಾಗಿದೆ. ಅಂತರ್ಜಲ ಮಟ್ಟ ಸುಸ್ಥಿರತೆ ಕಾದುಕೊಳ್ಳಲು ಕೆರೆಗಳ ಸಂರಕ್ಷಣೆ ಆಗಬೇಕು. ಕೆರೆಗಳ ಸಂರಕ್ಷಣೆ ಮಾಡಿದಾಗ ನಮ್ಮ ನೆಲ ಉಳಿಸಿಕೊಳ್ಳಲು ಸಾಧ್ಯ. ಇಂಧನ, ನೀರು, ವಿದ್ಯುತ್‌ಗಳನ್ನು ಉಪಭೋಗ ಮಾಡದೇ ನಿಯಮಿತವಾಗಿ ಬಳಕೆ ಮಾಡುವುದರಿಂದ ಪರಿಸರದ ಮೇಲಾಗುವ ದುಷ್ಪರಿಣಾಮ ತಡೆಯಬಹುದು ಎಂದರು.

**ಕೆರೆಗಳು ದೇವಸ್ಥಾನವಿದ್ದಂತೆ**

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದ ಸ್ವರ್ಣವಲ್ಲಿ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ, ಕೆರೆಗಳು ದೇವಸ್ಥಾನವಿದ್ದಂತೆ. ನೀರಿನ ಸಾನಿಧ್ಯವಿದ್ದಲ್ಲಿ ದೇವರ ಸಾನಿಧ್ಯವಿರುತ್ತದೆ ಎಂಬ ಭಾವನೆಯಿಂದಲೇ ಹಿರಿಯರು ದೇವಸ್ಥಾನದ ಎದುರು ಕೆರೆಗಳನು ನಿರ್ಮಿಸಿದರು.



ವಿವಿಧ ಅಧ್ಯಯನ ವರದಿಗಳ ಬಿಡುಗಡೆ

ದೇವಸ್ಥಾನ ಕಟ್ಟಿದಷ್ಟೇ ಪುಣ್ಯ ಕೆರೆ ಕಟ್ಟುವುದರಲ್ಲೂ ಇದೆ. ಹೊಸ ದೇವಸ್ಥಾನಗಳನ್ನು ಕಟ್ಟುವುದಕ್ಕಿಂತ ಹಳೆ ದೇವಸ್ಥಾನವನ್ನು ಜೀರ್ಣೋದ್ಧಾರಗೊಳಿಸಿದಂತೆ, ಹೊಸ ಕೆರೆಗಳ ನಿರ್ಮಾಣಕ್ಕಿಂತ ಹಳೆಯ, ಕಣ್ಮರೆಯಾಗುತ್ತಿರುವ ಕೆರೆಗಳ ಪುನರುಜ್ಜೀವನಗೊಳಿಸುವುದು ಅಗತ್ಯವಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ಬಗ್ಗೆ ನಿರ್ಲಕ್ಷ್ಯ ಭಾವನೆ ತಾಳದೇ ಕೆರೆಗಳ ಪುನರುಜ್ಜೀವನಗೊಳಿಸುವತ್ತ ಲಕ್ಷ್ಯ ವಹಿಸಬೇಕು. ಕೆರೆಗಳು ಮಲೀನವಾಗದಂತೆ ಸಂರಕ್ಷಿಸಿ ಅಭಿವೃದ್ಧಿ ಕೈಗೊಂಡರೆ ಅದೇ ನೀರು ಸೇರುವ ನದಿಗಳ ಸಂರಕ್ಷಣೆಯನ್ನು ಮಾಡಿದಂತಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಶಾಸಕ ವಿಶ್ವೇಶ್ವರ ಹೆಗಡೆ ಕಾಗೇರಿ, ವಾಗ್ದೇವಿ ವಿಲಾಸ ಸಂಸ್ಥೆ ಅಧ್ಯಕ್ಷ ಹರೀಶ, ವಿಜ್ಞಾನಿ ಡಾ.ಸುಭಾಷ್ ಚಂದ್ರನ್, ಪ್ರೊ.ಬಿ.ಎಂ.ಕುಮಾರಸ್ವಾಮಿ, ಆರ್.ಎಸ್.ನಾಯ್ಕ ಮಾತನಾಡಿದರು.

**ಕೆರೆ ಸಂರಕ್ಷಣೆಗೆ ಸನ್ಮಾನ**

ಇದೇ ಸಂದರ್ಭದಲ್ಲಿ ಕೆರೆ ಸಂರಕ್ಷಣೆಯಲ್ಲಿ ವಿಶೇಷ ಕೊಡುಗೆ ನೀಡಿರುವ ಸಾಗರ ತಾಲೂಕಿನ ಜಿಗಳೆಮನೆ ಗ್ರಾಮ ಅರಣ್ಯ ಸಮಿತಿಯ ಸದಸ್ಯರನ್ನು ಸ್ವರ್ಣವಲ್ಲೀ ಶ್ರೀಗಳು ಸನ್ಮಾನಿಸಿದರು.

ಮಠದ ಉಪಾಧ್ಯಕ್ಷ ವಿ.ಎನ್.ಹೆಗಡೆ ಬೊಮ್ಮನಳ್ಳಿ ಸ್ವಾಗತಿಸಿದರು. ವೃಕ್ಷಲಕ್ಷ ಆಂದೋಲನ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿಗಳು ವೇದಘೋಷ ಮಾಡಿದರು. ಅರ್ಚನಾ ಮತ್ತು ಸಂಗಡಿಗರು ಜಲ ಜಾಗೃತಿ ಗೀತೆ ಹಾಡಿದರು. ವಾಗ್ದೇವಿ ಶಿಕ್ಷಣ ಸಂಸ್ಥೆ ಮಕ್ಕಳಿಂದ ಕೆರೆಗಳ ರಕ್ಷಣೆ ಕುರಿತು ರೂಪಕ ನಡೆಯಿತು. ಅನಂತ ಭಟ್ಟ ಹುಳಗೋಳ ನಿರೂಪಿಸಿದರು. ಎಂ.ಸಿ.ಹೆಗಡೆ ವಂದಿಸಿದರು. ಇದಕ್ಕೂ ಮೊದಲು ಇಲ್ಲಿನ ಕೆರೆಗೆ ಪೂಜೆ ಸಲ್ಲಿಸುವ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಲಾಯಿತು.

## ಭೂ ಕಬಳಿಕೆಗೆ ಕಡಿವಾಣ

ರಾಜ್ಯದಲ್ಲಿ 36,000 ಕೆರೆಗಳಿವೆ. ಬೆಂಗಳೂರು ಆರಂಭದಲ್ಲಿ 300 ಕೆರೆಗಳಿದ್ದವು. ಆದರೆ ಕಳೆದ ಮೂವತ್ತು ವರ್ಷಗಳ ಅವಧಿಯಲ್ಲಿ ಭೂ ಮಾಫಿಯಾದ ಕಾರಣದಿಂದ ಕೆರೆಗಳು ನಾಶವಾಗಿವೆ. ಇಂತಹ ನೂರಾರು ಕೆರೆಗಳ ಕಬಳಿಕೆ ತಪ್ಪಿಸುವುದಕ್ಕೆ ಬೆಂಗಳೂರಿನ ಜನಪ್ರತಿನಿಧಿಯಾಗಿ ಪ್ರಯತ್ನಿಸಿದ್ದೇನೆ. ಕೆರೆಗಳ ಸಂರಕ್ಷಣೆಗೆ ಸಂಬಂಧಿಸಿ ಸಮ್ಮೇಳನದಲ್ಲಿ ತೆಗೆದುಕೊಳ್ಳುವ ಶಿಫಾರಸುಗಳ ವರದಿಯನ್ನು ತಮಗೆ ನೀಡಿದರೆ ಕೇಂದ್ರ ಜಲಸಂಪನ್ಮೂಲ ಸಚಿವರು, ಅರಣ್ಯ, ಪರಿಸರ ಸಚಿವರು ಹಾಗೂ ಪ್ರಧಾನಿ ಕಾರ್ಯಾಲಯದ ಅಧಿಕಾರಿಗಳೊಂದಿಗೆ ಚರ್ಚಿಸುವುದಾಗಿ ಅನಂತಕುಮಾರ ಭರವಸೆ ನೀಡಿದರು.

## ನದಿ ಜೋಡಣೆ ರಾಷ್ಟ್ರೀಯ ದುರಂತ

ನದಿ ಜೋಡಣೆಯನು ಕೈಗೊಂಡರೆ ಅದೊಂದು ರಾಷ್ಟ್ರೀಯ ದುರಂತ. ಲಕ್ಷಾಂತರ ಕೋಟಿ ಖರ್ಚು, ಅರಣ್ಯ ನಾಶ, ಲಕ್ಷಾಂತರ ಜನ ನಿರಾಶ್ರಿತರಾಗುವ ಈ ರಕ್ಕಸ ಯೋಜನೆಯನ್ನು ಕೇಂದ್ರ ಸರ್ಕಾರ ಶಾಶ್ವತವಾಗಿ ಕೈ ಬಿಡಬೇಕು. ಅದರ ಬದಲು ವಿಕೇಂದ್ರಿಕೃತ ಪರಂಪರೆ, ಅಭಿವೃದ್ಧಿ ಮಾದರಿ ಯೋಜನೆ ರೂಪಿಸಬೇಕು. ಕೆರೆ ಕಟ್ಟುವ, ಜೋಡಿಸುವ, ನದಿಗಳ ನೀರನ್ನು ಕೆರೆಗೆ ತುಂಬಿಸುವಂತ ಯೋಜನೆ ಕೈಗೆತ್ತಿಕೊಳ್ಳಬೇಕು ಎಂದು ಪ್ರೊ.ಬಿ.ಎಂ.ಕುಮಾರಸ್ವಾಮಿ ಒತ್ತಾಯಿಸಿದರು.



ಕೆರೆ ಸಂರಕ್ಷಣೆಗೆ ಸನ್ಮಾನ